## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** (1) ಶ್ರೀ ಚಂದ್ರಹಾಸ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಗ್ಗೆರೆ ಗ್ರಾಮ ಪಂಚಾಯತಿ ಮತ್ತು (2) ಶ್ರೀ ಷಡಕ್ಷರಿ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ/3574/2015/ಎಆರ್‌ಎಲ್‌ಓ-2, ದಿನಾಂಕ: 30-08-2017.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ/3574/2015/ಸನಿಕಾಸ-2, ದಿನಾಂಕ: 17-08-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ:17.08.2017ರ ವರದಿಯಲ್ಲಿ ಶ್ರೀ ಕೆ.ಟಿ.ಅನಿಲ್‌ಕುಮಾರ್, ಬಸವೇಶ್ವರ ನಗರ, ಬೆಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಚಂದ್ರಹಾಸ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು (2) ಶ್ರೀ ಷಡಕ್ಷರಿ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ ಕ್ರಮವಾಗಿ "1 ಮತ್ತು 2ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ಕುಣಿಗಲ್ ತಾಲ್ಲೂಕು ಕಗ್ಗೆರೆ ಗ್ರಾಮ ಪಂಚಾಯತಿಯಲ್ಲಿ ಎದುರುದಾರರು ನಿಯಮಗಳನ್ನು ಗಾಳಿಗೆ ತೂರಿ ತಮಗೆ ಇಷ್ಟಬಂದ ರೀತಿಯಲ್ಲಿ ಗ್ರಾಮ ಪಂಚಾಯತಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಎದುರುದಾರರು ಅವ್ಯವಹಾರ ಮಾಡಿದ ವಿವರ ಈ ಕೆಳಗಿನಂತಿರುತ್ತದೆ.

ದಿ:08.09.2015ರಂದು ಪಂಚಾಯತಿಗೆ ಖರೀದಿಸಿದ 180 ಫುಲ್ ಸೆಟ್ ಬಲ್ಬ್ ಮತ್ತು 100 ಬಲ್ಬ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದ್ದು, ಇವುಗಳನ್ನು ಖರೀದಿಸಲು ಕೊಟೇಷನ್ ಪಡೆದಿರುವುದಿಲ್ಲ. ಕಳಪೆ ಗುಣಮಟ್ಟದ್ದಾಗಿದ್ದು, ಖೊಟ್ಟೆ ಬಿಲ್ ಸೃಷ್ಟಿಸಿರುತ್ತಾರೆ. ಗ್ರಾಮ ಪಂಚಾಯತಿಯ ಅನುಮೋದನೆ ಪಡೆಯದೆ ಟೇಬಲ್, ಖುರ್ಚಿ ಹಾಗೂ ಇತರೆ ಉಪಕರಣಗಳನ್ನು ಖರೀದಿಸಿ, ಹೆಚ್ಚಿನ ನಗದು ನಮೂದಿಸಿ ಖೊಟ್ಟೆ ಬಿಲ್ ಸೃಷ್ಟಿಸಿರುತ್ತಾರೆ. ಗ್ರಾಮ ಪಂಚಾಯತಿಯ ಜನರಲ್ ಲೈಯನ್ಸ್‌ನಲ್ಲಿ ಲೈಸನ್ಸ್ ಪಡೆದವರ ಪ್ರತಿಯಲ್ಲಿ ಒಂದು ಮೊತ್ತವನ್ನು, ಕಛೇರಿ ದಾಖಲಾತಿಯಲ್ಲಿ ಒಂದು ಮೊತ್ತವನ್ನು ನಮೂದಿಸಿ ಹಣ ದುರ್ಬಳಕೆ ಮಾಡಿರುತ್ತಾರೆ. ಕಂದಾಯ ಮತ್ತು ವಾಟರ್ ಬಿಲ್‌ಗಳನ್ನು ಗೋಲ್ ಮಾಲ್ ಮಾಡಿರುತ್ತಾರೆ. 5 ವರ್ಷಗಳ ಶೌಚಾಲಯ ನಿರ್ಮಾಣದಲ್ಲಿ ಶೌಚಾಲಯ ಫಲಾನುಭವಿಗಳಿಗೆ ಪೂರ್ಣ ಹಣ ನೀಡದೆ ಅರ್ಧ ಹಣ ಪಾವತಿಸಿರುತ್ತಾರೆ. ಕುಡಿಯುವ ನೀರಿನ ಪಂಪ್ ಸೆಟ್ ರಿಪೇರಿ ಮತ್ತು ಸಾಮಗ್ರಿಗಳ ಖರೀದಿಯಲ್ಲಿ ಗೋಲ್‌ಮಾಲ್ ನಡೆದಿರುತ್ತದೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

1 ಮತ್ತು 2 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಆಪಾದನೆಗಳನ್ನು ಅಲ್ಲಗಳೆದು ಎಲ್ಲಾ ಸಾಮಗ್ರಿಗಳನ್ನು ಗ್ರಾಮ ಪಂಚಾಯತಿ ಅಧ್ಯಕ್ಷರ ಆದೇಶದ ಮೇರೆಗೆ ಖರೀದಿಸಿದ್ದು, ಆದರೆ ಇಲ್ಲಸಲ್ಲದ ಆರೋಪ ಮಾಡಿ ಒತ್ತಡ ಹೇರುತ್ತಿದ್ದಾರೆ. ಗ್ರಾಮ ಪಂಚಾಯತಿ ಅನುದಾನದಲ್ಲಿ ಯಾವುದೇ ಅವ್ಯವಹಾರ ಆಗಿರುವುದಿಲ್ಲ ಹಾಗೂ ಖೊಟ್ಟೆ ಬಿಲ್‌ಗಳನ್ನು ಸೃಷ್ಟಿಸಿರುವುದಿಲ್ಲ. ಶೌಚಾಲಯ ಪೂರ್ಣ ಮೊತ್ತ ಪಾವತಿಸಲು ಈ ಮೊದಲಿನ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸಿದ್ದು, ಯೋಜನೆಯ ಸಹ ಬದಲಾವಣೆಗೊಂಡ ಕಾರಣ ಎನ್.ಎಂ.ಆರ್. ತೆಗೆಯುವುದು ಸ್ಥಗಿತಗೊಂಡಿರುತ್ತದೆ. ಕುಡಿಯುವ ನೀರಿನ ಪಂಪ್ ಸೆಟ್ ರಿಪೇರಿ ಮತ್ತು

2..

ಸಾಮಗ್ರಿಗಳ ಖರೀದಿಯನ್ನು ಅಧಿಕೃತ ಟಿನ್ ನಂಬರ್ ಹೊಂದಿರುವ ಮೆಸರ್ಸ ಸುಷ್ಮಾ ಎಂಟರ್‌ಪ್ರೈಸಸ್ ಪ್ರೊಪ್ರೈಟರ್ ಶ್ರೀಮತಿ ವಿಜಯಲಕ್ಷ್ಮಿ ಕೆ ಇವರಿಂದ ಬಿಲ್ ಪಡೆದು ಹಣ ಪಾವತಿಸಲಾಗಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಈ ಪ್ರಕರಣದಲ್ಲಿ ತನಿಖೆ ಮಾಡಿ ವರದಿ ಸಲ್ಲಿಸಲು ತಾಂತ್ರಿಕ ವಿಭಾಗಕ್ಕೆ ಕಡತ ಕಳುಹಿಸಿದ್ದು, ತಾಂತ್ರಿಕ ವಿಭಾಗದ ಶ್ರೀ ಟಿ ಲಕ್ಷ್ಮಯ್ಯ, ಉಪನಿಯಂತ್ರಕರು (ಲೆಕ್ಕ ಪತ್ರ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಆ ವರದಿಯನ್ನು ಪರಿಶೀಲಿಸಿದಾಗ ದೂರಿನಲ್ಲಿ ನಮೂದಿಸಿರುವ ಆಪಾದನೆಗಳು ಸಾಬೀತಾಗಿರುತ್ತವೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.

ಬಲ್ಬುಗಳ ಖರೀದಿಯಲ್ಲಿ 2014-15ನೇ ಸಾಲಿನ 13ನೇ ಹಣಕಾಸು ಯೋಜನೆಯ ಕ್ರೀಯಾ ಯೋಜನೆ ತಯಾರಿಸಲಾಗಿದ್ದು, ಅದರಲ್ಲಿ 180 ಫುಲ್ ಸೆಟ್ ಬಲ್ಬಗಳನ್ನು ಖರೀದಿಸಲು ಅವಕಾಶ ಮಾಡಿಕೊಂಡಿರುವುದಿಲ್ಲ. ತುಲನಾತ್ಮಕ ಪಟ್ಟಿಯನ್ನು ತಯಾರಿಸಿರುವುದಿಲ್ಲ. ಮೆ.ವಿ.ಎಲ್.ಎಂಟರ್‌ಪ್ರೈಸಸ್ ನಮೂದಿಸಿರುವ ದರಗಳು ಮಾರುಕಟ್ಟೆ ದರಕ್ಕಿಂತ ಕಡಿಮೆ ಇರುವ ಬಗ್ಗೆ ದೃಢೀಕರಿಸಿರುವುದಿಲ್ಲ. ಆದ್ದರಿಂದ ಆಪಾದನೆ ಈ ತನಿಖೆಯಲ್ಲಿ ಸಾಬೀತಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.

ಗ್ರಾಮ ಪಂಚಾಯತಿಗೆ ಖರೀದಿಸಿರುವ ಟೇಬಲ್, ಖುರ್ಚಿ ಹಾಗೂ ಇತರೆ ಉಪಕರಣಗಳ ಖರೀದಿ ಬಿಲ್ ಮತ್ತು ದರಪಟ್ಟಿಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ದಿನಾಂಕಗಳನ್ನು ನಮೂದಿಸಿರುವುದಿಲ್ಲ. ತಾಲ್ಲೂಕು, ಜಿಲ್ಲಾ ಮತ್ತು ರಾಜಧಾನಿಗಳಿಂದ ದರಪಟ್ಟಿಗಳನ್ನು ಪಡೆದು ತುಲನಾತ್ಮಕ ಪಟ್ಟಿ ತಯಾರಿಸಿ, ಮಾರುಕಟ್ಟೆ ದರಗಳಿಗಿಂತ ಕಡಿಮೆ ಇರುವ ದರಗಳನ್ನು ಖಚಿತಪಡಿಸಿಕೊಂಡು ಪೂರೈಕೆ ಮಾಡಲು ಆದೇಶವನ್ನು ನೀಡಿರುವುದಿಲ್ಲ. ಈ ವಸ್ತುಗಳ ಗುಣಮಟ್ಟದಲ್ಲಿ ಪ್ರಮಾಣೀಕರಿಸಿರುವುದಿಲ್ಲ. ಹೆಚ್ಚು ಬಿಲ್ ಸೃಷ್ಟಿಸಲು ದರಪಟ್ಟಿಗಳನ್ನು ಖುದ್ದಾಗಿ ಪಡೆದಿರುವ ಸಾಧ್ಯತೆ ಇರುತ್ತದೆ. ಆದ್ದರಿಂದ ಇದು ಕರ್ನಾಟಕ ಪಂಚಾಯತ್ ರಾಜ್(ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 60 ಮತ್ತು 70ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಕಂದಾಯ ಮತ್ತು ವಾಟರ್ ಬಿಲ್‌ಗಳನ್ನು ಗೋಲ್ ಮಾಲ್ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುವುದು ಸಾಬೀತಾಗಿರುವುದಿಲ್ಲ.

5 ವರ್ಷಗಳ ಶೌಚಾಲಯ ನಿರ್ಮಾಣದಲ್ಲಿ ಶೌಚಾಲಯ ಫಲಾನುಭವಿಗಳಿಗೆ ಪೂರ್ಣ ಹಣ ನೀಡದೆ ಅರ್ಧ ಹಣ ಪಾವತಿಸಿದ ಬಗ್ಗೆ ತನಿಖೆ ಮಾಡಲಾಗಿ 2012-13ರಲ್ಲಿ ನರೇಗಾ ಯೋಜನೆಯಡಿ 2,98,995/- ರೂ.ಗಳು ಪಾವತಿಯಾಗಿದ್ದು, 1,24,237/- ರೂ ಬಾಕಿ ಇದೆ. 2013-14ನೇ ಸಾಲಿನ ನರೇಗಾ ಯೋಜನೆಯಡಿ ರೂ.34,114/- ಪಾವತಿಯಾಗಿದ್ದು, ಎನ್.ಬಿ.ಎ. ಯೋಜನೆಯಡಿ ರೂ.1,35,300/- ಪಾವತಿಯಾಗಿದೆ. 2014-15 ರಲ್ಲಿ ನರೇಗಾ ಯೋಜನೆಯಡಿ 1,15,872/- ರೂ.ಗಳು ಪಾವತಿಯಾಗಿದ್ದು, ರೂ.84,118/- ಬಾಕಿ ಇದೆ. ಎನ್.ಬಿ.ಎ ಮತ್ತು ಎಸ್.ಬಿ.ಎಂ. ಯೋಜನೆಯಡಿಯಲ್ಲಿ 11,02,600/- ರೂ.ಗಳು ಪಾವತಿಯಾಗಿದೆ. 2015-16ನೇ ಸಾಲಿನ ರೂ.6,38,500/- ಪಾವತಿಯಾಗಿದೆಯೆಂದು ಎದುರುದಾರರು ತನಿಖಾಧಿಕಾರಿಗಳಿಗೆ ಉತ್ತರಿಸಿದ್ದು ಕಂಡುಬರುತ್ತದೆ.

2015-16ನೇ ಸಾಲಿನವರೆಗೆ ನರೇಗಾ, ನಿರ್ಮಲ್, ಸ್ವಚ್ಛ ಭಾರತ್ ಮಿಷನ್ ಯೋಜನೆಗಳಡಿ ಸುಮಾರು 225 ಶೌಚಾಲಯಗಳು ನಿರ್ಮಾಣವಾಗಿದ್ದು, ಅದಕ್ಕೆ 18,07,846/- ರೂ.ಗಳು ಬಿಡುಗಡೆಯಾಗಿದ್ದು, ಒಂದು ಶೌಚಾಲಯಕ್ಕೆ ನರೇಗಾ ಯೋಜನೆಯಡಿ ರೂ.4500/-, ನಿರ್ಮಲ ಯೋಜನೆಯಡಿ ರೂ.4700/- ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ.12,000/- ದಿಂದ 15,000/- ಗಳು ಇರುತ್ತದೆ. ಆದರೆ ದಾಖಲೆಗಳನ್ನು ಪರಿಶೀಲಿಸಲಾಗಿ ಬಿಡುಗಡೆಯಾದ ಮೊತ್ತಕ್ಕೂ ಮತ್ತು ಖರ್ಚಾದ ಮೊತ್ತಕ್ಕೂ ತಾಳೆಯಾಗುತ್ತಿಲ್ಲ. ಸರ್ಕಾರದಿಂದ ಬಿಡುಗಡೆ ಮಾಡಿರುವ ಒಟ್ಟು ಅನುದಾನಕ್ಕಿಂತ ರೂ.3,66,963/- ಫಲಾನುಭವಿಗಳಿಗೆ ಹೆಚ್ಚುವರಿ ಬಿಡುಗಡೆಮಾಡಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಆದರೆ ಯಾವ ಮೂಲದಿಂದ ಈ ಹಣ ಪಾವತಿಸಲಾಗಿದೆಯೆಂಬುದು ಸ್ಪಷ್ಟವಿರುವುದಿಲ್ಲ. ಆದ್ದರಿಂದ ಈ ಆಪಾದನೆ ಕೂಡ ಸಾಬೀತಾಗಿರುತ್ತದೆ.

ಕುಡಿಯುವ ನೀರಿನ ಪಂಪ್ ಸೆಟ್ ರಿಪೇರಿ ಮತ್ತು ಸಾಮಗ್ರಿಗಳ ಖರೀದಿಯಲ್ಲಿ 13ನೇ ಹಣಕಾಸು ಯೋಜನೆ ಮತ್ತು ಗ್ರಾಮ ಪಂಚಾಯತಿ ನಿಧಿ ಸ್ಥಳೀಯ ಮೂಲಗಳಿಂದ ಬಂದ ತೆರಿಗೆಯಿಂದ ಹಾಗೂ 2014-15

ನೇ ಮಾಚ್ ಅಂತ್ಯದಲ್ಲಿ ಕ್ರಿಯಾ ಯೋಜನೆ ತಯಾರಿಸಿದ್ದು, ಅದರಂತೆ ವೆಚ್ಚ ಭರಿಸಲಾಗಿದೆ. ಕುಡಿಯುವ ನೀರಿಗಾಗಿ 7,70,000/-ಗಳು ಬಿಡುಗಡೆಯಾಗಿದ್ದು, ಅದರಲ್ಲಿ 6,55,346/- ರೂ.ಗಳನ್ನು ಉಪಯೋಗಿಸಿದ್ದು, ಬಾಕಿ ಉಳಿದ ಹಣ ರೂ.1,14,654/- ಎಂದು ತಿಳಿಸಿರುವರು. ಆದರೆ, ಅಶ್ವಿನಿ ಸ್ಟೋರ್ಸ್ ಈಶ್ವರ ಕಾಂಪ್ಲೇಕ್ಸ್, ಬಿ.ಎಂ.ರಸ್ತೆ, ಕುಣಿಗಲ್ ಅವರ ಕ್ಯಾಷ್ ಇನ್‌ವಾಯ್ಸ್ ಸಂ.4039 ದಿ:16.02.2016 ಕ್ಲೇಮು ಮಡಿರುವ ರೂ.18,029/- ಚೆಕ್ ಸಂ.369363 ದಿ:15.03.2016ರಲ್ಲಿ ಪಾವತಿಸಿರುವುದಾಗಿ ದಾಖಲೆ ಸಲ್ಲಿಸಲಾಗಿದೆ. ಇದೇ ಸಂಸ್ಥೆಯ ಇನ್ವಾಯ್ಸ್ ಸಂ.4044 ದಿ:17.02.2016 ಸಂಬಂಧಿಸಿದ ರೂ.5,908/-ಗಳನ್ನು ಪಾವತಿಸಲಾಗಿದ್ದು, ದರಪಟ್ಟಿಗಳನ್ನು ತನಿಖೆಗೆ ಸಲ್ಲಿಸಲಾಗಿದೆಯೆಂದು 1ನೇ ಎದುರುದಾರರು ಹೇಳಿದ್ದು, ಆದರೆ 1ನೇ ಎದುರುದಾರರು ಹಾಜರುಪಡಿಸಿರುವುದಿಲ್ಲ. ಇದೇ ಸಂಸ್ಥೆಯಿಂದ ಪಿವಿಸಿ ಪೈಪು ಮತ್ತು ಇತರ ಸಾಮಗ್ರಿಗಳನ್ನು ದರಪಟ್ಟಿಗಳನ್ನು ಪರಿಶೀಲನೆಗೆ ಸಲ್ಲಿಸಿದ್ದು, ದಾಸ್ತಾನು ಮತ್ತು ಉಪಯೋಗದ ವಿವರ ಸಲ್ಲಿಸಿರುವುದಿಲ್ಲ. ಈ ಸಂಸ್ಥೆಯು ಪಿವಿಸಿ ಪೈಪುಗಳ ಅಧಿಕೃತ ಮಾರಾಟಗಾರರಾಗಿರುವುದಿಲ್ಲ. ಆದ್ದರಿಂದ ಈ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದ್ದು, ಈ ಆಪಾದನೆ ಕೂಡ ಸಾಬೀತಾಗಿರುತ್ತದೆ.

ಕಳೆದ 5 ವರ್ಷಗಳಲ್ಲಿ ನಿರ್ಮಿಸಲಾದ ಶೌಚಾಲಯಗಳಿಗೆ ಹಣ ಬಿಡುಗಡೆಯಾಗಿದ್ದು ಹಾಗೂ ಖರ್ಚು ಮಾಡಿದ ಹಣಕ್ಕೆ ಅಂಕಿಅಂಶಗಳ ವ್ಯತ್ಯಾಸವಿದ್ದು ಇವುಗಳನ್ನು ತನಿಖೆಗೆ ಒದಗಿಸದೆ ಕರ್ತವ್ಯಲೋಪವೆಸಗಿದ್ದು, ಆದ್ದರಿಂದ ಈ ಅಂಶವು ಸಾಬೀತಾಗಿರುತ್ತದೆ. ಈ ಮೇಲ್ಕಂಡ ಕಾರಣಗಳ ಮೇರೆಗೆ 1 ಮತ್ತು 2ನೇ ಎದುರುದಾರರ ವಿರುದ್ಧ ಆಪಾದನೆಗಳು ತನಿಖೆಯಲ್ಲಿ ಸಾಬೀತಾಗಿರುತ್ತವೆಂದು ಅಭಿಪ್ರಾಯಪಟ್ಟು ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಈ ಎಲ್ಲ ದಾಖಲೆಗಳು ಹಾಗೂ ತನಿಖಾಧಿಕಾರಿಗಳ ವರದಿ ಪರಿಶೀಲಿಸಿದಾಗ ದೂರಿನಲ್ಲಿ ಆಪಾದಿಸಿರುವ ಅಂಶಗಳು ರುಜುವಾತಾಗಿದ್ದು, 1 ಮತ್ತು 2ನೇ ಎದುರುದಾರರು ತಮ್ಮ ಕರ್ತವ್ಯವನ್ನು ದುರುಪಯೋಗ ಪಡಿಸಿಕೊಂಡು ಸರ್ಕಾರದ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದುದರಿಂದ, 1 ಮತ್ತು 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1) (i) ಮತ್ತು (ii) ಅಡಿಯಲ್ಲಿ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ 1 ಮತ್ತು 2ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ 1 ಮತ್ತು 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರುಗಳ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/716/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 14-09-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ (1) ಶ್ರೀ ಚಂದ್ರಹಾಸ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (2) ಶ್ರೀ ಷಡಕ್ಷರಿ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 406 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕುಣಿಗಲ್, ತುಮಕೂರು ಜಿಲ್ಲೆ.
6. ಶ್ರೀ ಚಂದ್ರಹಾಸ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
7. ಶ್ರೀ ಷಡಕ್ಷರಿ, ಕಾರ್ಯದರ್ಶಿ, ಕಗ್ಗೆರೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
9. ಗಣಕ ಕೋಶ.